**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560012.

ಸಂಖ್ಯೆ: ಪಪೂಶಿಇ/ಪರೀಕ್ಷೆ/ಪ.ಉ.ಪ/2019-20 ದಿನಾಂಕ: 16.01.2020.

# ಸುತ್ತೋಲೆ

ವಿಷಯ: ಮಾರ್ಚ್ 2020ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಿಂದ 24 ಪುಟಗಳ ಬದಲಾಗಿ 40 ಪುಟಗಳ ಉತ್ತರಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಬಗ್ಗೆ.

* * * *

ಇದುವರೆಗೂ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ 24 ಪುಟಗಳ ಮುಖ್ಯ ಉತ್ತರಪತ್ರಿಕೆ ಹಾಗೂ 4 ಪುಟಗಳ ಹೆಚ್ಚುವರಿ ಹಾಳೆಗಳನ್ನು ನೀಡಲಾಗುತ್ತಿತ್ತು. ಆದರೆ ಹೆಚ್ಚುವರಿ ಹಾಳೆಗಳನ್ನು ಮುಖ್ಯ ಉತ್ತರ ಪತ್ರಿಕೆಗೆ ಕಟ್ಟುವಾಗ ವಿದ್ಯಾರ್ಥಿಗಳು ಸರಿಯಾಗಿ ಕಟ್ಟದೇ ಇರುವುದು ಹಾಗೂ ಬೇರೆ ವಿದ್ಯಾರ್ಥಿಯ ಮುಖ್ಯ ಉತ್ತರ ಪತ್ರಿಕೆಯೊಂದಿಗೆ ಸೇರಿಕೊಳ್ಳುವುದು ಕಂಡು ಬಂದಿರುತ್ತದೆ. ಅಲ್ಲದೇ Scanning, Revaluation ಹಾಗೂ Retotaling ಮಾಡುವ ಸಂದರ್ಭದಲ್ಲಿಯೂ ಸಹ ಹೆಚ್ಚುವರಿ ಹಾಳೆಗಳು ಮುಖ್ಯ ಉತ್ತರಪತ್ರಿಕೆಯಿಂದ ಬೇರ್ಪಡುವ ಸಂದರ್ಭ ಇರುತ್ತದೆ. ಪರೀಕ್ಷೆ ನಡೆಯುವ ಸಂದರ್ಭದಲ್ಲಿ ಹೆಚ್ಚುವರಿ ಹಾಳೆ ಪಡೆಯಲು ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಆಗಾಗ್ಗೆ ಕೊಠಡಿ ಮೇಲ್ವಿಚಾರಕರನ್ನು (Invigilator) ಕೇಳಬೇಕಾಗಿದ್ದು ಅದಕ್ಕಾಗಿ ಸಮಯ ವ್ಯರ್ಥವಾಗುತ್ತಿತ್ತು.

ಈ ಎಲ್ಲಾ ಹಿನ್ನೆಲೆಯಲ್ಲಿ 2020ರ ವಾರ್ಷಿಕ ಪರೀಕ್ಷೆಯಿಂದ ಹೆಚ್ಚುವರಿ ಹಾಳೆ ನೀಡುವುದನ್ನು ತಪ್ಪಿಸಲು ಹಾಗೂ ವಿದ್ಯಾರ್ಥಿಗಳಿಗೆ ಉಂಟಾಗುವ ತೊಂದರೆ ಹಾಗೂ ಗೊಂದಲಗಳನ್ನು ತಪ್ಪಿಸಲು ಇಲಾಖೆ ಕೂಲಂಕುಷವಾಗಿ ಪರಿಶೀಲಿಸಿ 2020ರ ವಾರ್ಷಿಕ ಪರೀಕ್ಷೆಯಿಂದ 24 ಪುಟಗಳ ಮುಖ್ಯ ಉತ್ತರ ಪತ್ರಿಕೆಗೆ ಬದಲಾಗಿ 40 ಪುಟಗಳ ಉತ್ತರ ಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡಲು ತೀರ್ಮಾನಿಸಲಾಗಿದ್ದು ಸದರಿ ವಿಷಯವನ್ನು ಎಲ್ಲಾ ಪ್ರಾಂಶುಪಾಲರು ತಮ್ಮ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಳ್ಳಲಿರುವ ವಿದ್ಯಾರ್ಥಿಗಳ ಗಮನಕ್ಕೆ ತರಲು ಈ ಮೂಲಕ ಸೂಚಿಸಲಾಗಿದೆ.

ಮುಖ್ಯ ಉತ್ತರಪತ್ರಿಕೆಯ ಒಂದು ಮಾದರಿ ಪುಟವನ್ನು (A4 Size ನ 30 Line ಗಳುಳ್ಳ ಪುಟ) ವಿದ್ಯಾರ್ಥಿಗಳ ಗಮನಕ್ಕೆ ತರಲು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಯನ್ನು :

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಗಮನಕ್ಕಾಗಿ.
2. ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಗಮನಕ್ಕಾಗಿ.
3. ಹೆಚ್ಚುವರಿ / ಕಛೇರಿ ಪ್ರತಿ.